

# ದೇವರು ಬಂತು!

ವೈ-ಚಾರಿ

ಎಲ್ಲಾರ್ನ್ ಕಾಯೋ ದ್ಯಾವ್ರೇ ನೀನು ಎಲ್ಲಿ ಕುಂತಿದ್ದೀ ನಮ್ಮನ್ನೆಲ್ಲ ಭೂಮ್ಯಾಗ್ಬಿಟ್ಟು ಏನು ಮಾಡ್ತಿದ್ದೀ? ನೀ ಏನು ಮಾಡ್ತಿದ್ದೀ?

ಎಲ್ಲಾರ್ನ್ ಕಾಯೋ ದ್ಯಾವ್ರೇ....

ಎಂದಾಕ್ಷಣ ಇಲ್ಲೇ ಇದ್ದೇನೆ ಎಂದು ದೇವರು ಮೈಮೇಲೆ ಬರುತ್ತಾನೆ! ದೇವರು (ಅಥವಾ ಆತ್ಮ) ಮೈಮೇಲೆ ಬರುವುದು ಜಗದ್ವ್ಯಾಪಿ ನಂಬಿಕೆಗಳಲ್ಲಿ ಒಂದಾಗಿದೆ. ಆದರೆ ಇದು ಸಾಧ್ಯವೆ? ಜಗನ್ನಿಯಾಮಕನಾದ ದೇವನು ಈ ರೀತಿ ಒಬ್ಬರ ಮೈಮೇಲೆ ಬಂದು ಒಂದೆರಡು ತಾಸು ಸ್ಪೆಷಲ್ ಕ್ಲಾಸ್ ತೆಗೆದುಕೊಳ್ಳುವುದು ಸಾಧ್ಯವೇ? ಇಲ್ಲವೆಂದಾದರೆ ಅಸಲಿಗೆ ನಡೆಯುವುದಾದರೂ ಏನು?

ದೇವರು ಮೈಮೇಲೆ ಬರುವುದಕ್ಕೆ ಸ್ಥೂಲವಾಗಿ ಎರಡು ಸನ್ನಿವೇಶಗಳು ಕಾರಣವೆನ್ನಬಹುದು.

ಪ್ರತಿ ವ್ಯಕ್ತಿಗೂ ಎರಡು ವಿಧವಾದ ವ್ಯಕ್ತಿತ್ವಗಳಿರುತ್ತವೆ. ಒಂದು ಜಗತ್ತು ಅವನನ್ನು ಕಾಣುವ ಪರಿ, ಇನ್ನೊಂದು ತನ್ನನ್ನು ತಾನೇ ಕಾಣುವ ಪರಿ. ಎರಡನೆಯ ಪರಿಯಲ್ಲಿ ಪ್ರತಿ ವ್ಯಕ್ತಿಯೂ ತಾನು ಉತ್ತಮನು ಎಂಬ ನಂಬಿಕೆ ಹೊಂದಿರುವುದು ಕಂಡುಬರುತ್ತದೆ. I am okay, you are not okay ಎಂಬ ಅಭಿಪ್ರಾಯ ಮೂಡಿರುತ್ತದೆ. ಇದಕ್ಕೆ ತಕ್ಕಂತೆ ಅವನ ಸಮೀಪದವರೂ ಅವನಿಗೆ ಪ್ರಾಶಸ್ತ್ಯ ಕೊಟ್ಟರೆ ಮನಸ್ಸು ಪ್ರಫುಲ್ಲವಾಗಿರುತ್ತದೆ. ಆದರೆ ಆ ವ್ಯಕ್ತಿತ್ವವನ್ನು ಬಹಳವೇ ಒತ್ತಡದಡಿಯಲ್ಲಿ ಹತ್ತಿಕ್ಕಿದರೆ ಮನಸ್ಸು ಯಾವುದಾದರೂ ದಾರಿಯಿಂದ ಪ್ರಾಮುಖ್ಯತೆ ಸಂಪಾದಿಸಲು ಯತ್ನಿಸುತ್ತದೆ. ಕ್ಷೋಭೆಗೊಳಗಾದ ಮನ ದೇವರುಗಳು ಮೈಮೇಲೆ ಬಂದವರಿಗೆ ದೊರೆಯುವ ಮನ್ನಣೆಯನ್ನು ಗಮನಿಸಿ ತಾನೂ ಕ್ಷೋಭೆಯಿಂದ ಹೊರಬರಲು ಅದೇ ದಾರಿಯನ್ನು ಹಿಡಿಯಲು ಯತ್ನಿಸುತ್ತದೆ. ಅತ್ತೆಯ ಮೇಲಿನ ಕೋಪವನ್ನು ಸಾಮಾನ್ಯ ಸಂದರ್ಭಗಳಲ್ಲಿ ತೋರಿಸಲಾಗದ ಸೊಸೆ ಎಲ್ಲರೆದುರೂ ಅತ್ತೆಯನ್ನು ಬೈದು ಸೇಡು ತೀರಿಸಿಕೊಳ್ಳಲು ದೇವರು ಸಹಾಯ ಮಾಡುತ್ತದೆ. ತಂದೆಯ ಆಳ್ವಿಕೆಗೆ ಬೇಸತ್ತ ಮಗನ ಮೇಲೂ ದೇವರು ಬಂದು ತಂದೆಯನ್ನು ವಾಚಾಮಗೋಚರವಾಗಿ ಬೈಯುವುದು ಕಾಣಬರುತ್ತದೆ. ಅದೇ ರೀತಿ ಕೀಳುಜಾತಿ ಎಂದೋ, ಉಪಯೋಗಕ್ಕೆ ಬಾರದವನು ಎಂದೋ ಜರೆಯಲ್ಪಡುವವನ ಮೇಲೆಯೂ ದೇವರು ಬರುವುದನ್ನು ಕಾಣಬಹುದು. ಸಾಮಾಜಿಕವಾಗಿ, ಮಾನಸಿಕವಾಗಿ ತುಚ್ಛೀಕರಿಸಲ್ಪಟ್ಟವರಿಗೆ ಮೈಮೇಲಿನ ದೇವರು ವರವಾಗಿ ಪರಿಣಮಿಸುತ್ತದೆ.

ಎರಡನೆಯ ಸನ್ನಿವೇಶದಲ್ಲಿ ವ್ಯಕ್ತಿಯು ತನ್ನ ಹಿಡಿತವನ್ನು ಯಾವುದೇ ಕಾರಣಕ್ಕೂ ಸಡಿಲಗೊಳಿಸಲು ಇಚ್ಛಿಸದ ಕಾರಣ ಮೈಮೇಲೆ ದೇವರನ್ನು ಬರಿಸಿಕೊಳ್ಳುತ್ತಾನೆ. ದೇಗುಲದ ಪೂಜಾರಿಗಳು, ಸಾಧುಗಳು, ಮಂತ್ರವಾದಿಗಳು ಇತ್ಯಾದಿ ಸಮಾಜದಲ್ಲಿ ಗೌರವವನ್ನು ಭಯದ ಆಧಾರದ ಮೇಲೆ ಹೊಂದಿರುವ ವ್ಯಕ್ತಿಗಳು ತಮ್ಮ ಹಿಡಿತವನ್ನು ಮತ್ತೂ ದೃಢಪಡಿಸಿಕೊಳ್ಳುವ ಸಲುವಾಗಿ ದೇವರನ್ನು ಮೈಮೇಲೆ ಬರಿಸಿಕೊಳ್ಳುತ್ತಾರೆ ಹಾಗೂ ದೇವರು ಬಂದಿರುವ ಸಮಯದಲ್ಲಿ ತಮಗೆ ಆಗಬೇಕಾದ ಕೆಲಸಗಳನ್ನೆಲ್ಲಾ ದೇವರ ನುಡಿ ಯ ಮೂಲಕ ಹೇಳಿ ಸಾಧಿಸಿಕೊಂಡುಬಿಡುತ್ತಾರೆ.

ನನಗೆ ತಿಳಿದಮಟ್ಟಿಗೆ ಮೊದಲನೆಯ ಸನ್ನಿವೇಶದಲ್ಲಿ ಇಂದಿನವರೆಗೆ ತಿರುಪತಿಯ ತಿಮ್ಮಪ್ಪನಾಗಲಿ, ಸಾಯಿಬಾಬಾ ಆಗಲಿ, ಲಕ್ಷ್ಮಿ-ಸರಸ್ವತಿಯರಾಗಲಿ ಮೈಮೇಲೆ ಬಂದದ್ದಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಕಾಳಿ, ದುರ್ಗಿ, ಉಲ್ಲೂರಮ್ಮ, ಪ್ಲೇಗಮ್ಮ, ಇತ್ಯಾದಿ ಗ್ರಾಮದೇವತೆಗಳೇ ಮೈಮೇಲೆ ಬರುವುದು ಅದೂ ಹೆಂಗಸರ ಮೈಮೇಲೇ ಹೆಚ್ಚು. ಇದರಿಂದ ಒಂದಂತೂ ಸ್ಪಷ್ಟ; ಮೈಮೇಲೆ ಬಂದ ದೇವರು ಕ್ರೂರವಾದಷ್ಟೂ ಭಯ ಹೆಚ್ಚಿ, ಕಾಣಿಕೆ ಹೆಚ್ಚಿ, ಭಕ್ತಿ ಹೆಚ್ಚುವುದರಿಂದ ದೇವರನ್ನು ಮೈಮೇಲೆ ಬರಿಸಿಕೊಂಡವರಿಗೆ ಧನ, ನೆಮ್ಮದಿ ಲಭ್ಯ. ಆದ್ದರಿಂದ ಬೇಕೆಂದೇ ಇವರು ಮೈಮೇಲೆ ದೇವರು ಬಂದವರಂತೆ ಆಡುತ್ತಾರೆ.

ಎರಡನೆಯ ಸನ್ನಿವೇಶದಲ್ಲಿ ಪೂಜಾರಿ, ಸಾಧುಗಳ ಮೇಲೆ ಗ್ರಾಮದೇವತೆ ಅಥವಾ ಅವರೇ ಪೂಜೆ ಮಾಡುವ ದೇವತೆಯೇ ಮೈಮೇಲೆ ಬರುತ್ತದೆ. ಇದಕ್ಕೆ ಕಾರಣ ಅವರು ತಮ್ಮನ್ನು ದೇವನು ಸಂಪೂರ್ಣ ಆವರಿಸಿದ್ದಾನೆ, ತಮ್ಮ ಮೂಲಕ ನುಡಿಯಲು ಬಯಸುತ್ತಾನೆ ಎಂದು ತೋರಿಸಿಕೊಂಡು ತಮ್ಮ ಘನತೆ ಹೆಚ್ಚಿಸಿಕೊಳ್ಳುವುದೇ ಆಗಿರುತ್ತದೆ. ಎರಡೂ ಸನ್ನಿವೇಶಗಳಲ್ಲಿ ಕ್ಲಿಷ್ಟವಾದ ಪ್ರಶ್ನೆಗಳನ್ನೋ, ದೇವರು ಮೈಮೇಲೆ ಬರಿಸಿಕೊಂಡವರ ಕುಕೃತ್ಯಗಳನ್ನು ಬಯಲಿಗೆಳೆಯುವ ವಿಚಾರಗಳನ್ನೋ ಎತ್ತಿದರೆ ದೇವರು ತಕ್ಷಣ ಮಂಗಮಾಯವಾಗುವುದು ತಿಳಿಯದ ಸಂಗತಿಯೇನಲ್ಲ.

ದೇವರು ಮೈಮೇಲೆ ಬರುತ್ತಾನೆ ಎಂಬುದು ಶುದ್ಧವಾದ ಸುಳ್ಳು. ಇದೊಂದು ಚಿತ್ತಭ್ರಮೆ. ನಿಜಕ್ಕೂ ತಮ್ಮ ಮೇಲೆ ದೇವರು ಬರುತ್ತದೆಂದು ನಂಬಿರುವವರಿಗೆ ಮಾನಸಿಕ ಚಿಕಿತ್ಸೆ ಅಗತ್ಯ. ಇತರರನ್ನು ಹೆದರಿಸಿ ದುಡ್ಡು ಮಾಡಿಕೊಳ್ಳಲು ದೇವರನ್ನು ಬರಿಸಿಕೊಳ್ಳುವವರು ಶಿಕ್ಷಾರ್ಹರು. ಸಂವಿಧಾನದ 62ನೇ ಪರಿಚ್ಛೇದದಲ್ಲಿ ಇದು ಶಿಕ್ಷಾರ್ಹ ಅಪರಾಧವೂ ಹೌದು. ವಿಚಾರವಾದಿಗಳಾದ ಅಬ್ರಹಾಂ ಕೋವೂರ್, ಎಚ್ .ನರಸಿಂಹಯ್ಯ, ನರೇಂದ್ರ ನಾಯಕ್ ಮೊದಲಾದವರು ಈ ವಿಧದ ಬೊಗಳೆ ದೇವಮಾನವರನ್ನು ಬಯಲಿಗೆಳೆದದ್ದು ಇದಕ್ಕೆ ಮತ್ತಷ್ಟು ಪುಷ್ಟಿಕೊಡುವ ಅಂಶವಾಗಿದೆ. ದೇವನಿಹನು ಸ್ವರ್ಗದಲ್ಲಿ, ಶಾಂತಿಯಿಹುದು ಭೂಮಿಯಲ್ಲಿ ಎಂಬ ಕವಿವಾಣಿಯಂತೆ ದೇವರು ಇದ್ದರೂ ಅದೊಂದು ಅನೂಹ್ಯ, ಅಗ್ರಾಹ್ಯ ವಸ್ತುವಾಗಿರುತ್ತದೆಯೇ ವಿನಹ ಮೈಮೆಲೆ ಬಂದು ನಾಟಕವಾಡುವ ಪಾತ್ರಧಾರಿಯಂತೂ ಆಗಿರುವುದಿಲ್ಲ ಎಂದು ಸಂಪ್ರದಾಯಶರಣರೂ ಒಪ್ಪುತ್ತಾರೆ.

ಕವಿ ಸಿದ್ಧಲಿಂಗಯ್ಯನವರು ಮೈಮೇಲೆ ದೇವರು ಬಂದ ಪ್ರಸಂಗಗಳನ್ನು ಬಹಳ ಸ್ವಾರಸ್ಯಕರವಾಗಿ ವರ್ಣಿಸಿದ್ದಾರೆ. ' ಒಬ್ಬನ ಮೈಮೇಲೆ ಹನುಮಂತ ಬಂದಿದ್ದ. ಅದೇ ಸಮಯದಲ್ಲಿ ಅದೇ ಹಳ್ಳಿಯ ಇನ್ನೊಬ್ಬನ ಮೇಲೆ ರಾಮ ಬಂದಿದ್ದ. ದೇವರು ಬಂದಿರುವ ಆ ಇಬ್ಬರೂ ಹೂಂಕರಿಸುತ್ತಾ ಹಳ್ಳಿಯ ಮಧ್ಯಭಾಗಕ್ಕೆ ಬಂದರು. ರಾಮ ಮೈಮೇಲೆ ಬಂದವನು ಹನುಮಂತ ಮೈಮೇಲೆ ಬಂದವನಿಗೆ ಸಾಲ ತೀರಿಸಲಾಗದೆ ತಪ್ಪಿಸಿಕೊಂಡು ತಿರುಗುತ್ತಿದ್ದ. ಅಂದು ಎದುರಿಗೆ ಕಂಡಾಕ್ಷಣ ರಾಮ ಏರಿದವನನ್ನು ಹನುಮಂತ ಏರಿದವನು ಅವಾಚ್ಯ ಶಬ್ದಗಳಿಂದ ಬೈಯುತ್ತಾ ಅಟ್ಟಿಸಿಕೊಂಡು ಹೋದ ಎಂಬುದು ಅವರು ಬರೆದಿರುವುದರ ಸಂಕ್ಷಿಪ್ತ ರೂಪ'.

ದೇವರು ಮೈಮೇಲೆ ಬರುವುದಿಲ್ಲ ಎನ್ನುವುದಕ್ಕೆ ಇದಕ್ಕಿಂತಲೂ ಉತ್ತಮ ಉದಾಹರಣೆಗಳು ವಿರಳ.